O.S .No. 367/2015

ಪಿ.ಡಬ್ಲ್ಯೂ-1

ದಿನಾಂಕ: 18.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಸ್.ಎಸ್.ಜಿ. ವಕೀಲರಿಂದ

ದಾವೆ ಹೂಡಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಿಮ್ಮ ತಂದೆ ಈಶ್ವರಾಚಾರಿ ಎಂದು ತೋರಿಸಲು ಆರ್.ಡಿ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನೀವು ನ್ಯಾಯಾಲಯಕ್ಕೆ ಆರ್.ಡಿ ವಂಶವೃಕ್ಷವನ್ನು ಹಾಜರುಪಡಿಸಲ್ಲದೇ ಇದ್ದರೂ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಈಶ್ವರಾಚಾರಿ ರವರ ಮಗ ಎಂದು ತೋರಿಸಲು ಆರ್.ಡಿ ವಂಶವೃಕ್ಷವನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನೀವು ಆರ್.ಡಿ ವಂಶವೃಕ್ಷವನ್ನು ಹಾಜರುಪಡಿಸಿದರೇ, ಈಶ್ವರಾಚಾರಿ ರವರ ನಿಜವಾದ ವಾರಸುದಾರರು ಯಾರು ಎಂದು ಗೊತ್ತಾಗುತ್ತದೆಂದರೆ ಸರಿ. ನಿಮ್ಮ ವಾದ ಪತ್ರದಲ್ಲಿ ಈಶ್ವರಾಚಾರಿ ರವರು ಯಾವಾಗ ಮೃತಪಟ್ಟರು ಹಾಗೂ ಅವರ ಹೆಂಡತಿ ಯಾರು ಎಂದು ಬರೆಸಿಲ್ಲ ಎಂದರೆ ಸಾಕ್ಷಿ ಬರೆಸಿದ್ದೇನೆ ಎಂದು ಹೇಳುತ್ತಾರೆ.

ನಿಮ್ಮ ತಂದೆ ಯಾವಾಗ ಮೃತಪಟ್ಟರು ಎಂದರೆ ಸಾಕ್ಷಿ ಗೊತ್ತಿಲ್ಲ, ನಾನು ಚಿಕ್ಕವ ಎಂದು ಹೇಳುತ್ತಾರೆ. ನಿಮ್ಮ ತಂದೆ ಮೃತಪಟ್ಟಾಗ ಅವರ ವಾರಸುದಾರರು ಯಾರ್ಯಾರು ಎಂದು ನಿಮ್ಮ ವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿ ಅದೆಲ್ಲ ತಲೆ ಓಡಿಲ್ಲ ಎಂದು ಹೇಳುತ್ತಾರೆ. ನಿಮ್ಮ ವಾದ ಪತ್ರದಲ್ಲಿ ವಕೀಲರು ಏನು ಬರವಣಿಗೆ ಮಾಡಿದ್ದಾರೆಂದು ನಿಮಗೆ ಖುದ್ದು ಗೊತ್ತಿಲ್ಲ ಎಂದರೆ ಸರಿ.

ಕಾಳಮ್ಮ ಹಾಗೂ ಈಶ್ವರಾಚಾರಿ ನನಗೆ ತಾಯಿ-ತಂದೆಯಾಗಬೇಕು. ನಿಮ್ಮ ತಾಯಿ ಕಾಳಮ್ಮ ಜೀವಂತ ಇದ್ದಾರಾ ಎಂದರೆ ಸಾಕ್ಷಿ ಇದ್ದಾರೆ ಎಂದು ಹೇಳುತ್ತಾರೆ. ಕಾಳಮ್ಮ ನಿಮ್ಮ ತಾಯಿ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಕಾಳಮ್ಮ ನಿಮ್ಮ ತಾಯಿಯಲ್ಲ ಎಂದರೆ ಸರಿಯಲ್ಲ.

ಈಶ್ವರಾಚಾರಿರವರಿಗೆ ಹೆಣ್ಣು ಮಕ್ಕಳಿದ್ದು, ಅವರುಗಳೆಂದರೆ ಕಮಲಮ್ಮ, ಸಾವಿತ್ರಮ್ಮ, ಮತ್ತು ಕೃಷ್ಣಮ್ಮ ಎಂದು ಹೇಳುತ್ತಾರೆ. ಸದರಿ ಮೂರು ಜನ ಹೆಣ್ಣು ಮಕ್ಕಳು ಜೀವಂತ ಇದ್ದಾರೆಂದರೆ ಸರಿ. ಸದರಿ ಹೆಣ್ಣು ಮಕ್ಕಳನ್ನು ದಾವೆಯಲ್ಲಿ

ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರಿಗೆಲ್ಲ ಪಾಲು ಕೊಟ್ಟಿದೆ ಎಂದು ಹೇಳುತ್ತಾರೆ.

**(** ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ**,** ಆಲಿಸಿ ಅನುಮತಿಸಲಾಯಿತು**.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.